2023 ಶಿಕ್ಷಣ

# ‘ಶಿಕ್ಷಣದ ಮೌಲ್ಯ ಅಂಕಗಳಲ್ಲಿ ಇಲ್ಲ...

**ನಮ್ಮ ಸಂವಿಧಾನ ಪ್ರತಿಪಾದಿಸುವ ಭ್ರಾತೃತ್ವ, ಸೌಹಾರ್ದತೆ ಮತ್ತು ತಾರತಮ್ಯ ರಹಿತ ಮೌಲ್ಯಗಳ ನೆಲೆಯಲ್ಲಿ ಹೊಸ ಸಮಾಜವನ್ನು ಕಟ್ಟಿಕೊಡಬಹುದಾದ ನೈಜ ಶಿಕ್ಷಣದ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ.**



**ನಿರಂಜನಾರಾಧ್ಯ ವಿ.ಪಿ.**
ಅಭಿವೃದ್ಧಿ ಶಿಕ್ಷಣ ತಜ್ಞ



ಶಿಕ್ಷಣ, ಸಾಮಾಜಿಕ ಒಳಿತು ಮತ್ತು ಸಾಮಾಜಿಕ ಪರಿವರ್ತನೆಯ ಸಾಧನ ಎಂಬುದು ನಿರ್ವಿವಾದ. ಒಂದು ಸಮಾಜದಲ್ಲಿ ಸಾಮರಸ್ಯ, ಸೌಹಾರ್ದತೆ, ಪರಸ್ಪರ ಗೌರವದೊಂದಿಗೆ ಶಾಂತಿಯುತ ಸಹಬಾಳ್ವೆಯ ಭೂಮಿಕೆಯನ್ನು ಕಟ್ಟಿಕೊಡುವಲ್ಲಿ ಶಿಕ್ಷಣದ ಪಾತ್ರ ನಿರ್ಣಾಯಕ. ದೇಶ ಹಾಗೂ ರಾಜ್ಯದಲ್ಲಿ ಇತ್ತೀಚಿನ ವರ್ಷಗಳ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಜಾತಿ, ಧರ್ಮ, ಪಕ್ಷ ರಾಜಕಾರಣ, ವೈಯಕ್ತಿಕ ನಿಂದನೆ, ಇತ್ಯಾದಿಗಳು ನಮ್ಮ ಭ್ರಾತೃತ್ವ, ಸಹೋದರಿ/ಸಹೋದರತ್ವ ಹಾಗೂ ಸೌಹಾರ್ದತೆಯ ಬದುಕಿಗೆ ಹಲವು ಬಗೆಯ ಹೊಸ ಸವಾಲುಗಳನ್ನು ಒಡ್ಡುತ್ತಿವೆ. ಆತಂಕದ ವಿಷಯವೆಂದರೆ, ವಿದ್ಯಾವಂತರೇ ಜಾತಿ–ಧರ್ಮದ ಹೆಸರಿನಲ್ಲಿ ಪರಸ್ಪರ ಕಚ್ಚಾಡುವ ಹಾಗೂ ದ್ವೇಷ ಬಿತ್ತುವ ಕೆಲಸದಲ್ಲಿ ಮುಂಚೂಣಿಯಲ್ಲಿದ್ದಾರೆ. ನಮ್ಮ ಸಂವಿಧಾನ ತನ್ನ ಪ್ರಸ್ತಾವನೆಯಲ್ಲಿ ಪ್ರಧಾನವಾಗಿ ಒತ್ತಿ ಹೇಳಿರುವ ಒಂದು ಅಂಶವೆಂದರೆ, ವೈಯಕ್ತಿಕ ಘನತೆ ಮತ್ತು ದೇಶದ ಏಕತೆ ಮತ್ತು ಸಮಗ್ರತೆಯನ್ನು ಸಾಧಿಸಲು ಎಲ್ಲರಲ್ಲೂ ಭ್ರಾತೃತ್ವವನ್ನು ಪ್ರೋತ್ಸಾಹಿಸುತ್ತದೆ ಎಂಬುದು. ಈ ಕಾರಣದಿಂದಲೇ, ಯುನೆಸ್ಕೊ ಈ ಶತಮಾನದ ಪ್ರಾರಂಭದಿಂದಲೇ, ಶಿಕ್ಷಣ/ಕಲಿಕೆಯನ್ನು ನಾಲ್ಕು ಆಧಾರ ಸ್ಥಂಭಗಳ ನೆಲೆಯಲ್ಲಿ ಮರು ವ್ಯಾಖ್ಯಾನಿಸುವ ಪ್ರಯತ್ನವನ್ನು ಮಾಡಿದೆ. ಅದರಂತೆ, ಶಿಕ್ಷಣದಲ್ಲಿ ನಾಲ್ಕು ಸ್ಥಂಭಗಳ ತತ್ವಗಳನ್ನು ಪ್ರತಿಪಾದಿಸುತ್ತದೆ. ಅವುಗಳೆಂದರೆ:

1. ತಿಳಿಯಲು ಕಲಿಯುವುದು: ಈ ಸ್ತಂಭವು ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ–ಪರಿಹರಿಸುವ ಕೌಶಲಗಳನ್ನು ತಿಳಿಯಲು ಗಣಿತ, ವಿಜ್ಞಾನ ಮತ್ತು ಭಾಷೆಯಂತಹ ಪ್ರಮುಖ ವಿಷಯಗಳ ಮೂಲಭೂತ ಜ್ಞಾನ ಮತ್ತು ತಿಳಿವಳಿಕೆಯನ್ನು ಪಡೆದುಕೊಳ್ಳುವ ಪ್ರಾಮುಖ್ಯವನ್ನು ಒತ್ತಿಹೇಳುತ್ತದೆ.

2. ಮಾಡಲು ಕಲಿಯುವುದು: ಈ ಸ್ತಂಭವು ಪ್ರಾಯೋಗಿಕ ಕೌಶಲಗಳ ಗಳಿಕೆ ಮತ್ತು ನೈಜ ಸಂದರ್ಭಗಳಲ್ಲಿ ಜ್ಞಾನ ಮತ್ತು ತಿಳಿವಳಿಕೆಯನ್ನು ಅನ್ವಯಿಸುವ ಸಾಮರ್ಥ್ಯದ ಮೇಲೆ ಕೇಂದ್ರೀಕರಿಸುತ್ತದೆ.

3. ಒಟ್ಟಿಗೆ ಬದುಕಲು ಕಲಿಯುವುದು: ಈ ಸ್ಥಂಭವು ಸಾಮಾಜಿಕ ಮತ್ತು ಭಾವನಾತ್ಮಕ ಕಲಿಕೆಯ ಪ್ರಾಮುಖ್ಯ ಮತ್ತು ಸಂವಹನ, ಸಹಯೋಗ ಮತ್ತು ಸಂಘರ್ಷ ಪರಿಹಾರದಂತಹ ಕೌಶಲಗಳ ಅಭಿವೃದ್ಧಿಯನ್ನು ಒತ್ತಿಹೇಳುತ್ತದೆ. ಇದು ಸಾಮರಸ್ಯ, ಸೌಹಾರ್ದತೆ, ಸಹಿಷ್ಣುತೆ, ಗೌರವ ಮತ್ತು ಸಹಾನುಭೂತಿಯಂತಹ ಮೌಲ್ಯಗಳ ಪ್ರಚಾರವನ್ನು ಸಹ ಒಳಗೊಂಡಿದೆ.

4. ತಾನು ತಾನಾಗಿ ಇರಲು ಕಲಿಯುವುದು: ಈ ಸ್ಥಂಭವು ಇಡೀ ವ್ಯಕ್ತಿಯ ಬೆಳವಣಿಗೆ ಮತ್ತು ವೈಯಕ್ತಿಕ ಪ್ರತಿಭೆ, ಆಸಕ್ತಿಗಳು ಮತ್ತು ಭಾವನಾತ್ಮಕ ಬೆಳವಣಿಗೆಯ ಮೇಲೆ ಕೇಂದ್ರೀಕರಿಸುತ್ತದೆ. ಇದು ಸೃಜನಶೀಲತೆ, ಕುತೂಹಲ ಮತ್ತು ಸ್ವಯಂ ಅರಿವಿನಂತಹ ವಿಷಯಗಳನ್ನು ಒಳಗೊಂಡಿದೆ. ಇಂದು ಪ್ರಪಂಚದಾದ್ಯಂತ ಅನೇಕ ದೇಶಗಳು ತಮ್ಮ ಶಿಕ್ಷಣ ವ್ಯವಸ್ಥೆಗಳಲ್ಲಿ ಈ ನಾಲ್ಕು ಸ್ಥಂಭಗಳ ತತ್ವಗಳನ್ನು, ಅಂಶಗಳನ್ನು ಅಳವಡಿಸಿಕೊಂಡು ಮುಂದೆ ಹೋಗುತ್ತಿವೆ.

ನಾವು 2022ನ್ನು ಮುಗಿಸಿ 2023ರ ಹೊಸ್ತಿಲಲ್ಲಿರುವ ಈ ಸಂದರ್ಭದಲ್ಲಿ, ಶಿಕ್ಷಣವನ್ನು ಪರೀಕ್ಷೆ–ಅಂಕಗಳಿಕೆಯ ಸಂಕುಚಿತ ವ್ಯಾಪ್ತಿಯಿಂದ ಹೊರತಂದು, ಎಲ್ಲರೂ ಸಾಮರಸ್ಯದಿಂದ ಬದುಕುವ ಹಾಗೂ ಹೊಸ ಮಾನವೀಯ ಸಮಾಜವನ್ನು ಕಟ್ಟಿಕೊಳ್ಳಲು ಪೂರಕವಾದ ಮೌಲ್ಯಾಧಾರಿತ ಶಿಕ್ಷಣದ ಬಗ್ಗೆ ಗಂಭೀರವಾಗಿ ಯೋಚಿಸಬೇಕಿದೆ. ನಮ್ಮ ಸಂವಿಧಾನ ಪ್ರತಿಪಾದಿಸುವ ಭ್ರಾತೃತ್ವ, ಸೌಹಾರ್ದತೆ ಮತ್ತು ತಾರತಮ್ಯ ರಹಿತ ಮೌಲ್ಯಗಳ ನೆಲೆಯಲ್ಲಿ ಹೊಸ ಸಮಾಜ ಕಟ್ಟಿಕೊಡಬಹುದಾದ ನೈಜ ಶಿಕ್ಷಣದ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ. ■